# ಸೂಚನೆಗಳು/Instructions

ದಿನಾಂಕ 29.5.2023ರಿಂದ ಶುಲ್ಕ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ತಂದೆ/ತಾಯಿ ಅಥವಾ ಪೋಷಕರು ವಿದ್ಯಾರ್ಥಿಯ ಜೊತೆಗೆ ಬಂದು ಶಾಲೆ ಹಾಗೂ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಮಾಡಿಸಬಹುದು. ದಿನಾಂಕ 29.5.2023 ರಿಂದಲೇ ತರಗತಿಗಳು ಪ್ರಾರಂಭವಾಗುತ್ತವೆ. ದಿನಾಂಕ 05.6.2023 ರಂದು ದಾಖಲಾತಿಗೆ ಕೊನೆಯ ದಿನವಾಗಿರುತ್ತದೆ.

## ಶಾಲೆಗೆ ನೀಡಬೇಕಾದ ದಾಖಲೆಗಳ ವಿವರ

1. ಆನ್‌ಲೈನ್ ವರ್ಗಾವಣೆ ಪತ್ರವನ್ನು (**ಟಿ.ಸಿ**) ಶಾಲೆಗೆ ದಾಖಲು ಮಾಡುವ ಸಂದರ್ಭದಲ್ಲಿ ನೇರವಾಗಿ ತಲುಪಿಸಬೇಕು. ದಾಖಲಾದ 15 ದಿನಗಳ ಒಳಗೆ ಟಿ.ಸಿ.ಯನ್ನು ಶಾಲೆಗೆ ತಲುಪಿಸುವ ಜವಾಬ್ದಾರಿ ಪೋಷಕರದ್ದೇ ಆಗಿರುತ್ತದೆ.
2. ಅಂಕಪಟ್ಟಿ, ಜಾತಿ ಹಾಗೂ ವಾರ್ಷಿಕ ಆದಾಯ ಪ್ರಮಾಣಪತ್ರದ ಮೂಲ ದಾಖಲೆಗಳು ಹಾಗೂ ಒಂದು ಜೊತೆ ಜೆರಾಕ್ಸ್ ಪ್ರತಿಗಳು.
3. **ಬ್ಯಾಂಕ್‌ಖಾತೆ ಪ್ರತಿ:** ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ತೆರೆದಿರುವ ಖಾತೆಯ ಮೊದಲನೆಯ ಪುಟದ ಜೆರಾಕ್ಸ್ ಪ್ರತಿ ಒದಗಿಸಬೇಕು.
4. ವಿದ್ಯಾರ್ಥಿಯ ಪಾಸ್‌ಪೋರ್ಟ್ ಅಳತೆಯ ಎರಡು ಫೋಟೋಗಳು.
5. ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ (ವಿದ್ಯಾರ್ಥಿ, ತಂದೆ, ತಾಯಿ, ಪೋಷಕರು)
6. ಸಮವಸ್ತ್ರ, ಪಠ್ಯಪುಸ್ತಕ, ನೋಟ್‌ಪುಸ್ತಕಗಳ ಶುಲ್ಕ

## ವಿದ್ಯಾರ್ಥಿನಿಲಯಕ್ಕೆ ಒದಗಿಸಬೇಕಾದ ದಾಖಲೆಗಳು ಹಾಗೂ ತರಬೇಕಾದ ವಸ್ತುಗಳು

1. ವಿದ್ಯಾರ್ಥಿಯ ವೈದ್ಯಕೀಯ ಪ್ರಮಾಣಪತ್ರ (ಜೆರಾಕ್ಸ್ ಪ್ರತಿ)
2. ಜಾತಿ ಹಾಗೂ ವಾರ್ಷಿಕ ಆದಾಯ ಪ್ರಮಾಣಪತ್ರ, ರೇಷನ್‌ಕಾರ್ಡ್(ಜೆರಾಕ್ಸ್ ಪ್ರತಿ)
3. ವಿದ್ಯಾರ್ಥಿಯ ಪಾಸ್‌ಪೋರ್ಟ್ ಅಳತೆಯ 6 ಫೋಟೋಗಳು
4. ತಟ್ಟೆ, ಲೋಟ, ಚಾಪೆ, ಜಮಖಾನ, ಹೊದಿಕೆ, ದಿನನಿತ್ಯದ ಉಡುಪುಗಳು, ಟ್ರಂಕ್, ಬಕೆಟ್, ಮಗ್, ಸೋಪು, ಬಾಚಣಿಗೆ, ಟವೆಲ್ ಇತ್ಯಾದಿ.